# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 801 (973) |
| ವಿಧಾನ ಸಭಾ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | : | 15.12.2025 |
| ಉತ್ತರಿಸುವ ಸಚಿವರು: | : | ಮಾನ್ಯ ಅರಣ್ಯ, ಪರಿಸರ ಮತ್ತು ಜೀವಪರಿಸ್ಥಿತಿ ಸಚಿವರು |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಉದ್ದದ ಕಡಲ ತೀರ ಮತ್ತು ನದಿ ತೀರವಿದೆ: ಈ ಜಲಮೂಲಗಳ ಪರಿಸರ ಸಂರಕ್ಷಣೆಗೆ ಇಲಾಖೆಯ ಕಾರ್ಯ ಕ್ರಮಗಳೇನು: ನದಿ ಮತ್ತು ಕಡಲ ತೀರದಲ್ಲಿ ಕೈಗಾರಿಕೆಗಳ ಮತ್ತು ಗೃಹತ್ಯಾಜ್ಯ ಸಂಸ್ಕರಿಸದೆ ಬಿಡುತ್ತಿರುವ ಬಗ್ಗೆ ಈಗಾಗಲೇ ಸಲ್ಲಿಕೆಯಾದ ದೂರುಗಳೆಷ್ಟು: ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು: | ರಾಜ್ಯದಲ್ಲಿ ಒಟ್ಟು 343 ಕಿ.ಮೀ ಉದ್ದದ ಕಡಲ ತೀರವನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಪ್ರಮುಖ ನದಿಗಳಿರುತ್ತವೆ (ನೇತ್ರಾವತಿ ನದಿ-103 ಕಿ.ಮೀ, ಕುಮಾರಧಾರ ನದಿ 80 ಕಿ.ಮೀ, ಪಯಸ್ವಿನಿ ನದಿ-105 ಕಿ.ಮೀ, ಗುರುಪುರ ನದಿ-80 ಕಿ.ಮೀ ಮತ್ತು ನಂದಿನಿ ನದಿ-80 ಕಿ.ಮೀ). ಅವುಗಳ ಒಟ್ಟಾರೆ ಉದ್ದವು ಅಂದಾಜು 418 ಕಿ.ಮೀ ಇರುತ್ತದೆ. ಉಡುಪಿ ಜಿಲ್ಲೆಯ ನದಿ ತೀರ ವ್ಯಾಪ್ತಿ 250 ಕಿ.ಮೀ ಆಗಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನದಿ ತೀರ 336 ಕಿ.ಮೀ. ಉದ್ದವಿರುತ್ತದೆ.<br><br>ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಸಿರು ನ್ಯಾಯಪೀಠದ ಆದೇಶದನ್ವಯ ನದಿ, ಸಮುದ್ರ ಮತ್ತು ಪಲ್ಗುಣಿ ನದಿಗೆ ಗೃಹತ್ಯಾಜ್ಯ ಮತ್ತು ಕೈಗಾರಿಕಾ ತ್ಯಾಜ್ಯ ಬಿಡುತ್ತಿರುವ ಬಗ್ಗೆ, ಪ್ರಾದೇಶಿಕ ಕಛೇರಿ, ಮಂಗಳೂರು, ಇಲ್ಲಿಗೆ ದೂರು ಬಂದಿರುತ್ತದೆ ಹಾಗೂ ಈ ವಿಷಯ ಮಾನ್ಯ ಹಸಿರು ನ್ಯಾಯಪೀಠದಲ್ಲಿ 151/2023 (SZ)ರಂತೆ ಪ್ರಕರಣ ದಾಖಲಾಗಿದ್ದು, ಮಾಲಿನ್ಯ ಮೂಲಗಳನ್ನು ತಡೆಗಟ್ಟಲು ಕ್ರಿಯಾಯೋಜನೆ ತಯಾರಿಸಿದ್ದು, ಮಾನ್ಯ ಹಸಿರು ನ್ಯಾಯಾಧೀಕರಣಕ್ಕೆ ಸಲ್ಲಿಕೆಯಾಗಿರುತ್ತದೆ. ಮುಂದುವರೆದು, ನಿಯಮಗಳನ್ನು ಉಲ್ಲಂಘಿಸಿರುವ ಕಾರ್ಖಾನೆಗಳಿಗೆ ನೋಟೀಸ್, ಉದ್ದೇಶಿತ ಮುಚ್ಚುವ ಆದೇಶ ಹಾಗೂ ಮುಚ್ಚುವ ಆದೇಶಗಳನ್ನು ಮಂಡಳಿಯಿಂದ ನೀಡಲಾಗಿದೆ. ಬೈಕಂಪಾಡಿಯಲ್ಲಿ ಒಟ್ಟು 6 ಕಾರ್ಖಾನೆಗಳಿಗೆ ಮಂಡಳಿಯ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಪರಿಸರ ಪರಿಹಾರ ಮೊತ್ತವನ್ನು ವಿಧಿಸಲಾಗಿದೆ. ಗೃಹತ್ಯಾಜ್ಯವನ್ನು ನದಿಗೆ ಬಿಡುತ್ತಿರುವ ವಿಚಾರವಾಗಿ ಮಾನ್ಯ ಹಸಿರು ನ್ಯಾಯ ಪೀಠದಲ್ಲಿ 151/2023 ರಲ್ಲಿ ಕೆಐಎಡಿಬಿ ಹಾಗೂ ಮಂಗಳೂರು ಮಹಾನಗರ ಪಾಲಿಕೆಗೆ ಮಂಡಳಿಯಿಂದ ಪರಿಸರ ಪರಿಹಾರ ಮೊತ್ತವನ್ನು ಲೆಕ್ಕ ಹಾಕಿ ಅದನ್ನು ವಿಧಿಸುವ ವಿಚಾರವಾಗಿ ಮಂಡಳಿಯು ಮುಂದಿನ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.<br><br>ಮುಂದುವರೆದು, ಪ್ರಾದೇಶಿಕ ಕಛೇರಿ, ಮಂಗಳೂರು, ಇಲ್ಲಿಂದ ಪ್ರತಿ ತಿಂಗಳು ಈ ಮೇಲಿನ ಪ್ರಮುಖ 5 ನದಿಗಳ ನೀರನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗುತ್ತಿದೆ. ಅದರನ್ವಯ, ಎಲ್ಲಾ ನದಿಯ ನೀರು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನದಿ ನೀರಿನ ವರ್ಗೀಕರಣಗಳ ಪ್ರಕಾರ "ಬಿ" ವರ್ಗಕ್ಕೆ ಬರುತ್ತಿದೆ.<br><br>ಪರಿಸರ ಸಂರಕ್ಷಣೆಗೆ ಭಾರತ ಸರ್ಕಾರದ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಸುಸ್ಥಿರ ಕರಾವಳಿ ನಿರ್ವಹಣಾ ವಿಭಾಗದ ನಿರ್ದೇಶನದಂತೆ ಕಡಲ ತೀರದಲ್ಲಿ ಸಮುದ್ರ ಕಸ ಮತ್ತು ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವ ಮಹತ್ವಾಕಾಂಕ್ಷೆಯ ಪ್ರತಿಜ್ಞೆಯೊಂದಿಗೆ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದೆ. |

| | | |
|---|---|---|
| | | ಸದರಿ ಕಡಲ ತೀರದಲ್ಲಿ ಗೃಹ ತ್ಯಾಜ್ಯ ಸಂಸ್ಕರಿಸದೇ ಬಿಡುತ್ತಿರುವ ಬಗ್ಗೆ 03 ದೂರುಗಳು ಸಲ್ಲಿಕೆಯಾಗಿರುತ್ತವೆ.<br>ಹೊನ್ನಾವರ ತಾಲೂಕಿನ ಹೊನ್ನಾವರ ಪಟ್ಟಣದ ಪಾಳ್ಯ ರಸ್ತೆ ಮಜಿರೆಯ ಮನೆ ಮಾಡಿಕೊಂಡಿರುವ ನಿವಾಸಿಗಳು ತ್ಯಾಜ್ಯ/ಮಲಿನ ನೀರನ್ನು ಪೈಪಲೈನ್ ಮೂಲಕ ಶರಾವತಿ ನದಿಗೆ ಬಿಡುತ್ತಿರುವ ಕುರಿತು ಪ್ರಕರಣ ಸಂಖ್ಯೆ: O.S.83/2019 ದಿನಾಂಕ:26.04.2019 ರಂದು ಸಿವಿಲ್ ಜಡ್ಜ್ ನ್ಯಾಯಾಲಯ ಹೊನ್ನಾವರದಲ್ಲಿ ದಾಖಲಾಗಿರುತ್ತದೆ.<br>ಕುಮಟಾ ತಾಲೂಕಿನ ಗೋಕರ್ಣ ಗ್ರಾಮದಲ್ಲಿ ಶ್ರೀಮತಿ ಅನಾ ಎಸ್. ಅಧ್ಯಕ್ಷರು ಖುಷಿ ಪರಿಸರ ಸ್ವಯಂ ಸೇವಾ ಸಂಸ್ಥೆಯವರು ಸಲ್ಲಿಸಿರುವ ದೂರರ್ಜಿ ಮೇರೆಗೆ ಸ್ಥಳ ಪರಿಶೀಲಿಸಿ ಉಲ್ಲಂಘನೆದಾರರ ಮೇಲೆ ಕುಮಟಾ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಹೈಕೋರ್ಟ್ ಆದೇಶದ ಮೇರೆಗೆ P.C.146/2025 ದಾಖಲು ಮಾಡಲಾಗಿದೆ.<br>ಕುಮಟಾ ತಾಲೂಕಿನ ಗೋಕರ್ಣ ವ್ಯಾಪ್ತಿಯ ಸಮುದ್ರ ತೀರದಲ್ಲಿ ಪರವಾನಿಗೆ ಅನಧಿಕೃತ ಪ್ರವಾಸೋದ್ಯಮ ಕಟ್ಟಡ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿ ಕುರಿತು ಮಾನ್ಯ ಹಸಿರು ನ್ಯಾಯಾಧೀಕರಣ ದಕ್ಷಿಣ ಪೀಠದಲ್ಲಿ ನಂ. O.A.118/2023 ದಾಖಲಾಗಿರುತ್ತದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕರಾವಳಿ ತೀರ ಪ್ರದೇಶದ ಸಂರಕ್ಷಣೆ, ಮತ್ತೆ ಸಂವರ್ಧನೆ ಹಾಗೂ ಪರಿಸರ ಸಮತೋಲನ ಕಾಯ್ದು ಕೊಳ್ಳುವಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುವ 'ಕಾಂಡ್ಲಾವನ' ನಿರ್ಮಾಣ ಹಾಗೂ ನಿರ್ವಹಣೆಗೆ ಸರಕಾರ ಕೈಗೊಂಡ ಕ್ರಮಗಳೇನು: ಪ್ರಸ್ತುತ ಉಭಯ ಜಿಲ್ಲೆಗಳಲ್ಲಿ ಇರುವ ಕಾಂಡ್ಲಾವನ ಪ್ರದೇಶಗಳಲ್ಲಿ ಖಾಸಗಿ ಮತ್ತು ಸರಕಾರಿ ಪ್ರದೇಶದ ವಿಸ್ತೀರ್ಣವೆಷ್ಟು; | ಮಂಗಳೂರು ಅರಣ್ಯ ವಿಭಾಗದ ವ್ಯಾಪ್ತಿ ಕರಾವಳಿ ತೀರ ಪ್ರದೇಶದಲ್ಲಿ ಕಾಂಡ್ಲಾವನ ಬೆಳೆಸಲು ಮಂಗಳೂರು ವಲಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸ್ಥಳಗಳಲ್ಲಿ K-shore ಯೋಜನೆಯಡಿ 2026-27ನೇ ಸಾಲಿನಲ್ಲಿ 10.00 ಹೆ. ಪ್ರದೇಶದಲ್ಲಿ ಕಾಂಡ್ಲಾವನವನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಮಂಗಳೂರು ವಲಯದ ವ್ಯಾಪ್ತಿಯಲ್ಲಿ ಖಾಸಗಿ ಮತ್ತು ಸರ್ಕಾರಿ ಪ್ರದೇಶಗಳು ಒಳಗೊಂಡಂತೆ ಅಂದಾಜು 200.00 ಹೆ. ಕಾಂಡ್ಲಾ ನೆಡುತೋಪುಗಳು ಇದೆ.<br>ಕುಂದಾಪುರ ವಿಭಾಗ ವ್ಯಾಪ್ತಿಯಲ್ಲಿ ಖಾಸಗಿ ಕಾಂಡ್ಲಾವನ ಪ್ರದೇಶ ಇರುವುದಿಲ್ಲ. ಪ್ರಸ್ತುತ ಸಾಲಿನಲ್ಲಿ ಕಾಂಡ್ಲಾವನ ಅಭಿವೃದ್ಧಿ ಅಂಗವಾಗಿ ಕೆ-ಶೋರ್ ಯೋಜನೆಯಡಿ 68.00 ಹೆ. ಕಾಂಡ್ಲಾ ನೆಡುತೋಪು ಬೆಳೆಸಲು ಪ್ರಸ್ತಾಪಿಸಲಾಗಿರುತ್ತದೆ. ಸದ್ರಿ ವಿಭಾಗದ ವ್ಯಾಪ್ತಿಯಲ್ಲಿ 950.00 ಹೆ. ಪ್ರದೇಶದಲ್ಲಿ ಕಾಂಡ್ಲಾವನಗಳು ನದಿ ತೀರದಲ್ಲಿ ಸರ್ಕಾರಿ ಜಾಗದಲ್ಲಿ ಇರುವುದಾಗಿದೆ. ಸದ್ರಿ ಕಾಂಡ್ಲಾ ವನಗಳ ಸರ್ವೆ ಕಾರ್ಯ ಆಗಬೇಕಾಗಿರುತ್ತದೆ. ಹಾಗೂ ಕಾಂಡ್ಲಾವನ ಅಭಿವೃದ್ಧಿ ಅಂಗವಾಗಿ ಕಳೆದ 05 ವರ್ಷಗಳಲ್ಲಿ ಬೆಳೆಸಲಾದ 235.00 ಹೆ. ಕಾಂಡ್ಲಾವನ ನೆಡುತೋಪುಗಳು ಇದೆ.<br>1. ಕಾಂಡ್ಲಾವನ ಇರುವ ಪ್ರದೇಶಗಳನ್ನು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019 ರಲ್ಲಿ ಅತೀ ಸೂಕ್ಷ್ಮ ಪರಿಸರಗಳೆಂದು ಗುರುತಿಸಿ, ಇಲ್ಲಿ ಪರಿಸರ ಸಂರಕ್ಷಣೆ ಕಾರ್ಯಗಳನ್ನು ಹೊರತುಪಡಿಸಿ ಇತರೆ ಯಾವುದೇ ರೀತಿಯ ಚಟುವಟಿಕೆಗಳನ್ನು ಅನುಮತಿಸಲಾಗುತ್ತಿಲ್ಲ.<br>2. NCSCM, ಚೆನ್ನೈ ರವರ ಅಧ್ಯಯನದ ವರದಿ ಪ್ರಕಾರ ಉಡುಪಿ ಜಿಲ್ಲೆಯಲ್ಲಿ 4.44 ಚ.ಕಿ.ಮೀ (444 ಹೆ.) ವ್ಯಾಪ್ತಿ ಪ್ರದೇಶದ ಸರ್ಕಾರಿ ಜಾಗದಲ್ಲಿ ಕಾಂಡ್ಲಾವನ ಇರುತ್ತದೆ.<br>3. ಪ್ರಾದೇಶಿಕ ಅರಣ್ಯ ವಿಭಾಗ, ಕುಂದಾಪುರ ರವರ ವ್ಯಾಪ್ತಿಯಲ್ಲಿ ಕೆ.ಶೋರ್ ಯೋಜನೆಯಡಿ 68 ಹೆ. ಕಾಂಡ್ಲಾ ನೆಡುತೋಪು ಬೆಳೆಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ ರವರು ಪ್ರಸ್ತಾಪಿಸಿರುತ್ತಾರೆ. |

| | | |
|---|---|---|
| ಇ) | ನೇತ್ರಾವತಿ, ಫಲ್ಗುಣಿ ಹಾಗೂ ಪಾವಂಜೆ ನದಿಗಳ ಹಿನ್ನೀರಿನ ಪ್ರದೇಶದಲ್ಲಿ ಬೆಳೆದು ನಿಂತಿರುವ ಕಾಂಡ್ಲಾವನ ಹಲವು ರೀತಿಯಲ್ಲಿ ಜಲಸಂಪತ್ತಿನ ಸಂರಕ್ಷಕವಾಗಿದ್ದರೂ ಇವುಗಳನ್ನು ಕಾಪಾಡುವ ಹಾಗೂ ಇನ್ನಷ್ಟು ಕಾಂಡ್ಲಾಗಿಡಗಳನ್ನು ಗಿಡಗಳನ್ನು ನೆಡುವ ಬಗ್ಗೆ ಚರ್ಚೆಗಳು ನಡೆದರೂ ಜಾರಿಗೆ ತರದಿರಲು ಕಾರಣವೇನು: ಯಾವಾಗ ಕಾಂಡ್ಲಾ ಬೆಳೆಸಲು ಕ್ರಮವಹಿಸಲಾಗುವುದು: | ನೇತ್ರಾವತಿ ಫಲ್ಗುಣಿ ಹಾಗೂ ಪಾವಂಜೆ ನದಿಗಳ ಹಿನ್ನೀರಿನ ಪ್ರದೇಶಗಳಲ್ಲಿ ಬೆಳೆದು ನಿಂತಿರುವ ಕಾಂಡ್ಲಾವನಗಳನ್ನು ರಕ್ಷಣೆ ಮಾಡಲಾಗುತ್ತಿದ್ದು, ಹೆಚ್ಚಿನ ಸ್ಥಳದ ಲಭ್ಯತೆ ಇಲ್ಲದ ಕಾರಣ ಹಾಗೂ ಮಂಗಳೂರು ತುಂಬಾ ಅಭಿವೃದ್ಧಿ ಹೊಂದಿರುವ ಕಾರಣ ಕಾಂಡ್ಲಾ ನೆಡಲು ಸೂಕ್ತ ಸ್ಥಳದ ಕೊರತೆ ಇರುತ್ತದೆ. |
| ಈ) | ಬೈಕಂಪಾಡಿ ಪ್ರದೇಶದಲ್ಲಿ ಬೆಳೆದಿದ್ದ ಕಾಂಡ್ಲಾಗಿಡಗಳು ಬೃಹತ್ ಉದ್ದಿಮೆಗಳ ತ್ಯಾಜ್ಯ ನೀರಿನ ದಾಳಿಗೆ ಒಳಗಾಗಿ ನಾಶವಾಗಿದ್ದು ಈ ಕುರಿತು ಸರ್ಕಾರ ಯಾವ ರೀತಿಯ ಕ್ರಮಕೈಗೊಳ್ಳುತ್ತಿದೆ? | ಬೈಕಂಪಾಡಿ ಪ್ರದೇಶದಲ್ಲಿರುವ ಬೃಹತ್ ಉದ್ಯಮಗಳಿಂದ ತ್ಯಾಜ್ಯ ನೀರು ಮಂಡಳಿಯ ಮಾನದಂಡಗಳಿಗೆ ಅನುಗುಣವಾಗಿ ತ್ಯಾಜ್ಯ ಸಂಸ್ಕರಣ ಘಟಕಗಳಲ್ಲಿ ಸಂಸ್ಕರಿಸಿ ಸಮುದ್ರಕ್ಕೆ ಪೈಪ್‌ಲೈನ್ ಮುಖಾಂತರ ವಿಸರ್ಜಿಸಲಾಗುತ್ತಿದೆ. ಇದನ್ನು Online Continuous Effluent Monitoring System (OCEMS) ಇದರ ಮುಖಾಂತರ Real Time ಆಧಾರಿತ ಮಾಪನ ಮಾಡಲಾಗುತ್ತಿದ್ದು, ಸದರಿ ಮಾಹಿತಿಯನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರ್ ಗಳಿಗೆ ಜೋಡಿಸಲಾಗಿರುತ್ತದೆ. |

ಸಂಖ್ಯೆ: ಅಪಜೀ 361 ಇಪಿಸಿ 2025.

(ಈಶ್ವರ ಬಿ.ಖಂಡ್ರೆ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.